ಎಂ.ಜಿ. ನೇಹವರ್ಷಿಣಿ, ಬಳ್ಳಾರಿ
ದೀಪವು ಸುತ್ತಲೂ ಬೆಳಕು ಕೊಟ್ಟು ತನ್ನ ಕೆಳಗೆ ಕತ್ತಲು ಇರುತ್ತೆ. ಏತಕ್ಕೆ?




ಅದು ಅನ್ಯಭಾಷೆಗಳಿಗೆ ಸ್ಥಳ ಕೊಟ್ಟು ತಾನೇ ಮರೆಯಾಗುವ ಕನ್ನಡಬುದ್ಧಿ!

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
ಮೂಗಿನಲ್ಲಿ ಸಿಂಬಳ ಬಂದರೆ ಅಮ್ಮ ಕ್ಲೀನ್ ಮಾಡುತ್ತಿದ್ದಳು. ಈಗ ಕೈತುಂಬ ಸಂಬಳ ಬಂದರೆ?
ಸರ್ಕಾರವು ಬೆಲೆ ಏರಿಕೆ, ತೆರಿಗೆಗಳ ಮೂಲಕ ಅಷ್ಟನ್ನೂ ಕ್ಲೀನ್ ಮಾಡುವುದು.

ಜೆ. ಪ್ರದೀಪಕುಮಾರ್, ಹೂವಿನಹಡಗಲಿ
ಈಗಿನ ಮದುವೆ ಮನೆಯ ಊಟಗಳಲ್ಲಿ ಐಟಮ್ಸ್ ಹೆಚ್ಚು, ರುಚಿ ಕಡಿಮೆ. ಏಕೆ?
ಅಡುಗೆ ಕಾಂಟ್ರ್ಯಾಕ್ಟ್ ಕೊಡುವಾಗಿನ ಅತಿ ಚೌಕಾಶಿಯ ಫಲ.

ಬೂಕನಕೆರೆ ವಿಜೇಂದ್ರ, ಮೈಸೂರು
ಶ್ರೀಮಂತರ ಮನೆಯಲ್ಲಿ ನಾಯಿ ಸತ್ತರೂ ಜನ ಸೇರುತ್ತಾರಲ್ಲ?



ನಾಯಿಯ ಜಾಗದಲ್ಲಿ ಬಾಲ ಅಲ್ಲಾಡಿಸಿಕೊಂಡು ಇರಲು ಸಿದ್ಧರೆನ್ನಲಂತೆ.

ಜೆ.ಆರ್. ಆದಿನಾರಾಯಣಮುನಿ, ಕೊಳ್ಳೇಗಾಲ
ಅನ್ಯಾಯದ ಸ್ಥಾನವು ನಿಜಕ್ಕೂ ಭದ್ರವಾಗಿರುತ್ತದೆಯೆ?
ಭ್ರಷ್ಟತೆಯ ಬುಡ ಭದ್ರವಿರುವಷ್ಟು ದಿನ ಅನ್ಯಾಯದ ಆಸ್ಥಾನವೇ ಭದ್ರವಾಗಿರತ್ತೆ.

ಅನಸೂಯಾ ಟಿ., ಕೇದಿಗೆಮನೆ
ಬೋಳ್ತಲೆ, ಉಬ್ಬಲ್ಲು, ಡೊಳ್ಳೊಟ್ಟೆ ಇದ್ಯಾವುದರ ಬಗ್ಗೆಯೂ ಚಿಂತಿಸದ ಗಂಡಸರೇ ಪರಮಸುಖಿಗಳಲ್ಲವೇ ಸಖಿ?
ಅಷ್ಟೇ ಅಲ್ಲ, ಅವುಗಳನ್ನ ರಿಫ್ಲೆಕ್ಟರ್, ಕ್ಯಾನ್ ಓಪನರ್, ಡೋರ್ ಪುಷರ್ ಆಗಿ ಬಳಸುವರಂತೆ.

ಸಿ.ಕೆ. ಗಣಪ್ಪನವರ, ಮುಂಡರಗಿ
ಮರಣಶಾಸನ ಎಂದರೇನು ಗುರುವೆ?
ಸಿಕ್ಕಿದವರಿಗೆ ಹೂರಣ, ಸಿಕ್ಕದವರಿಗೆ ದಾರುಣ ಎನಿಸುವ ಬರವಣಿಗೆ.

ಗಣೇಶ ಎಂ. ಪೈ, ಬೆಂಗಳೂರು
ಸ್ತ್ರೀ ಮೂಲ ನೋಡಬಾರದಂತೆ. ಲಗ್ನದ ಹರೆಯದ ಮಗನಿಗೆ ಕನ್ಯೆಯನ್ನು ಹೇಗೆ ಹುಡುಕಲಿ?
ಮೂಲರೂಪವನ್ನು ಮರೆಮಾಚುವ ಬ್ಯೂಟಿ ಪಾರ್ಲರ್ ಎದುರು ನಿಂತು ಯತ್ನಿಸಿ.

ಪಿ.ಎನ್. ಶ್ರೀವತ್ಸ, ಬೆಂಗಳೂರು
ಇತ್ತೀಚೆಗೆ ನಶ್ಯ ಹಾಕುವವರು ಗಣನೀಯವಾಗಿ ಕಡಿಮೆ ಆಗುತ್ತಿರುವ ಕಾರಣ?
ವಸ್ತು, ಕರವಸ್ತುಗಳನ್ನು ಕರೆ ಮಾಡ್ಕೊಂಡ್ರೆ ನಶ್ಯಕ್ಕಿಂತ ಘಾಟಾದ ಸೀನ್ ಸೃಷ್ಟಿಸುವ ಮನೆಮಂದಿ.

ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ
ಬದುಕಿಲ್ಲದವರಿಗೂ, ಬದುಕಿದ್ದವರಿಗೂ ವ್ಯತ್ಯಾಸವೇನು?
ಬದುಕು ಇದ್ದವರು ಸುಖ ಹಂಚಿದವರು; ಇಲ್ಲದವರು ದುಃಖ ಹಂಚಿದರು.

ಜಗದೀಶ ಬಿ. ಹೊಸೂರು, ಮೈಸೂರು
ದೇವರು ತನಗೆ ಆಕಾರವಿತ್ತ ಶಿಲ್ಪಿಗಿಂತ ಪೂಜಾರಿಗೆ ಹೆಚ್ಚಿನ ಆದಾಯ ಕರುಣಿಸಿರುವುದೇಕೆ?
ಹುಟ್ಟಿಸಿದವರಿಗಿಂತ 'ಮಂಗಳಾರತಿ', 'ಅಷ್ಟೋತ್ತರ' ಮಾಡುವವರನ್ನು ಚೆನ್ನಾಗಿಟ್ಟುಕೊಳ್ಳಬೇಕಲ್ಲ!

ಮಂಜುನಾಥ ಕೆ.ಪಿ. ಕೆ.ಟಿ. ಹಳ್ಳಿ
ಕರ್ನಾಟಕದಲ್ಲಿ ವಿದೇಶೀಯರಿಗೆ ಇಷ್ಟವಾಗುವ ತಾಣ ಯಾವುದು?
ಅವರನ್ನು ಕೆಕ್ಕರಿಸಿ/ತಿಂದುಬಿಡುವಂತೆ ನೋಡದ ಏಕೈಕ ತಾಣವಾದ ಜಾಲತಾಣ.

ಆರ್. ಮಧುಸೂದನ್, ಹಾಸನ
ಬ್ರಹ್ಮ ಸರಿಯಾಗಿ ಜೋಡಿ ಮಾಡಿದರೆ 'ಡಿವೋರ್ಸ್'ಗಳೇ ಆಗುವುದಿಲ್ಲ ಅಲ್ವಾ?
ವಕೀಲರ ಹಣೆಯಲ್ಲಿ ಜೋಡಿ ಮುರಿಯುವ ಬಾಬ್ತು ಬರೆಯದಿದ್ದರೆ ಮಾತ್ರ.

## ಬಹುಮಾನಿತ ಪ್ರಶ್ನೆ

ಎಸ್ವೆನ್ ಮಹಾಬಲರಾವ್, ಎನ್ನಾರ್‍ಪುರ
ಎಂಜಲು ಹಚ್ಚದೆ ಪುಟ ತಿರುವುವುದು ಹೇಗೆ?
ಗೋಳು ಕಾದಂಬರಿಯ ಪುಟಗಳಾದರೆ ಕಣ್ಣೀರನ್ನು ಬಳಸಬಹುದು.

ಮಂಡಿ ಕುಮಾರ್, ಬೆಂಗಳೂರು
ಹೆಂಗಸರ ತೋಳಿಲ್ಲದ ರವಿಕೆ ಬಂದಿದ್ದು ಹೇಗೆ?
ಕೊಟ್ಟ ಬ್ಲೌಸ್‌ಪೀಸಲ್ಲೇ ದರ್ಜಿ ತನ್ನವಳಿಗೂ ಒಂದು ಬ್ಲೌಸ್ ಹೊಲೆದುಕೊಂಡಾಗ.

ಮಲ್ಲಿಕಾರ್ಜುನ ಹುಲಗಬಾಳಿ, ಬನಹಟ್ಟಿ
ವಯಸ್ಸಾದವರಿಗೆ ತಲೆ ಬೋಳಾಗುವಂತೆ ಗಡ್ಡ ಮೀಸೆ ಏಕಾಗವು?
'ಹಾಲ್ಹಲ್ಲಿನ್ಜೊತೆ ಹುಟ್ಟವು ಹಲವು ವರ್ಷ; ಯೌವನದ್ದು ಯಾವತ್ತೂ' ಎಂಬುದು ಕೇಶಗಾದೆ.

ಸಿಹಿಮೊಗೆ ರಮೇಶ್, ಮೈಸೂರು
ಪೊಲೀಸರು ಹಾರಿಸುವ ಗುಂಡಿಗೂ, ಕುಡುಕ ಏರಿಸುವ ಗುಂಡಿಗೂ ಎತ್ತಣಿಂದೆತ್ತಣ ಸಂಬಂಧ?



ಎರಡೂ ಗುಂಡಿಗೆ ಕೆಡಿಸುವಂತಹವೇ.

ರತ್ನಜ, ಮೈಸೂರು
ಸೀತಾಪತಿ, ಲಕ್ಷ್ಮೀಪತಿ, ವೆಂಕಟಾಚಲಪತಿಗಳ ನಡುವೆ ಈ 'ಕಿತಾಪತಿ' ಯಾರು?
ಕಿಕಿರಿಕಿರಿ; ತಾತಾಪತ್ರಯ ಉಂಟಾಗಿಸುವವನು.

ಮೀನಾಕ್ಷಿ ರಾಮಗುಂಡಿ, ಬೈಲಹೊಂಗಲ
ಜೀವನದಲ್ಲಿ ಹಣದ ಪಾತ್ರವೇನು?
ನದಿಯ ನೀರಿನಂತೆ; ಕಡಿಮೆಯಿದ್ದರೂ ಚಿಂತೆ, ಹೆಚ್ಚಿದ್ದರೂ ಚಿಂತೆ.

ಹೆಚ್.ವಿ. ಶ್ರೀಧರ್, ಬೆಂಗಳೂರು
ಶವವನ್ನು ಮಣ್ಣಲ್ಲಿ ಹೂತು 'ಅವನು ಮೇಲಕ್ಕೆ ಹೋಗಿಬಿಟ್ಟ' ಎನ್ನುವರಲ್ಲ?
'ಆದ್ಮಿ ನೀಚೇ; ಆತ್ಮ ಊಪರ್' ಎನ್ನುವುದೇ ಮರಣ ನಿಯಮವಂತೆ.

■ ರಾಮ್